ಯಿಂದಲೇ ನಾವು ಅಜ್ಞಾನವನ್ನು ಅರ್ಥಮಾಡಿಕೊಳ್ಳುತ್ತೇವೆ.

**ಮಹಾರಾಜ್:** ಅದರಿಂದ ಬ್ರಹ್ಮಾನುಭವ ಸಾಧ್ಯವೆ?

**ಪ್ರಶ್ನೆ:** ಅದು ಬಿಟ್ಟು ಬೇರೆ ಉಪಾಯ?

**ಮಹಾರಾಜ್:** ಬ್ರಹ್ಮವನ್ನು ಹಿಡಿಯಲು ಉಪಾಯವಿಲ್ಲ, ಒಂದು ವೇಳೆ ನೀನೇ ಬ್ರಹ್ಮನಾದರೆ ಬ್ರಹ್ಮವನ್ನು ಹೇಗೆ ಹಿಡಿಯಬಲ್ಲೆ?

**ಪ್ರಶ್ನೆ:** ಒಂದು ವೇಳೆ ಬೇರೆ ಉಪಾಯವಿಲ್ಲ, ಹಾಗಾದರೆ ಅದನ್ನು ಹೇಳುವಂತದ್ದು ಯಾವುದು?

**ಮಹಾರಾಜ್:** ಯಾವುದು ಮಾತಾಡುತ್ತಿದೆಯೋ ಅದೇ ಅಜ್ಞಾನ.

**ಪ್ರಶ್ನೆ:** ಅರ್ಥವಾಗಲಿಲ್ಲ ಮಹಾರಾಜ್.

**ಮಹಾರಾಜ್:** ಆಗಲಿಲ್ಲವಲ್ಲ, ಬ್ರಹ್ಮನನ್ನು ಹಿಡಿಯುವರು ಯಾರು? ಬ್ರಹ್ಮವನ್ನು ಬಿಟ್ಟು ಬೇರೆ ಏನೂ ಇಲ್ಲವೆಂದರೂ, ಆಗಲೂ ಬ್ರಹ್ಮನನ್ನು ಹಿಡಿಯುವರಾರು? ಒಂದು ವೇಳೆ ಬ್ರಹ್ಮನನ್ನು ಬ್ರಹ್ಮವೇ ಹಿಡಿಯುತ್ತದೆಂದು ಹೇಳುವೆಯಾದರೆ ಅದು ದೋಷ. ಇಲ್ಲಿ ಬ್ರಹ್ಮವನ್ನು ಹಿಡಿಯುವರು ಯಾರೂ ಇಲ್ಲ, ಹಾಗೆ ಹೇಳಿದರೂ ದೋಷ.

**ಪ್ರಶ್ನೆ:** ಹಾಗಾದರೆ, ಬ್ರಹ್ಮ ಇದೆ, ಬ್ರಹ್ಮನ ಬಗ್ಗೆ ನಡೆಯುವ ಸಂಭಾಷಣೆ, ಇವುಗಳೆಲ್ಲವೂ ಮಿಥ್ಯೆ ಆಗುತ್ತದೆಯಲ್ಲವೆ?

**ಮಹಾರಾಜ್:** ಹೌದು, ಮಿಥ್ಯೆಯೇ. ಅಜ್ಞಾನದ ನಿವೃತ್ತಿಗಾಗಿ ಎಲ್ಲ ವಿಚಾರಗಳು. '**ತತ್ರ ವೇದಾಃ ಅವೇದಾಃ ಭವಂತಿ**' ವೇದಗಳೂ ಅಲ್ಲಿ ಅವೇದವಾಗುತ್ತವೆ.

**ಪ್ರಶ್ನೆ:** **ಅಶಬ್ದಮ್, ಅಸ್ಪರ್ಶಮ್** – ಹೇಳಲಾಗುತ್ತದೆ; ಶಾಸ್ತ್ರವು ಶಬ್ದರೂಪವನ್ನು ನೀಡಿ ಹೇಳುತ್ತಿದೆ. ಶಾಸ್ತ್ರವು ಯಾವುದನ್ನು ಹೇಳಲು ಅಪೇಕ್ಷಿಸುತ್ತದೋ ಅದನ್ನಿಲ್ಲಿ ಶಬ್ದರೂಪ ನೀಡಿ ಹೇಳಿದೆ.

**ಮಹಾರಾಜ್:** ಶಬ್ದರೂಪ ನೀಡಿ ಹೇಳಲಾಗುತ್ತಿದೆ ತಾನೆ? ಅದು ಶಬ್ದವಲ್ಲ. ಶಬ್ದವನ್ನು ಪ್ರತಿಷ್ಠೆ ಮಾಡಲು ಆಗುತ್ತದೆಯೇ?

**ಪ್ರಶ್ನೆ:** ಅರ್ಥ ಮಾಡಿಕೊಳ್ಳಲು ಹೇಳುತ್ತಿದ್ದೇವೆ. ಸ್ವರೂಪ ಏನೆಂದು ಅರಿಯದಿದ್ದರೂ ಅದರ ಬಗ್ಗೆ ಮಾತನಾಡುತ್ತೇವೆ.

**ಮಹಾರಾಜ್:** ಶಬ್ದವಿಲ್ಲವೆಂದಾದ ಮೇಲೆ ಶಬ್ದದ ಪ್ರತಿಷ್ಠೆ ಯಾಯಿತೆ?

**ಪ್ರಶ್ನೆ:** ಶಬ್ದವಿಲ್ಲ ಏಕೆ? ಬ್ರಹ್ಮ ಶಬ್ದವೇ ವ್ಯವಹಾರದಲ್ಲಿದೆ.

**ಮಹಾರಾಜ್:** ಶಬ್ದದ ಮೂಲಕ ಬ್ರಹ್ಮದ ವಿವರಣೆ ಕೊಡಲು ಆಗುವುದೇ ಇಲ್ಲ. ಅಶಬ್ದವೆಂದರೆ ಅದು ಶಬ್ದಾತೀತ ಎಂದರ್ಥ. **ಬ್ರಹ್ಮ** ಎಂಬ ಶಬ್ದವನ್ನು ಕೂಡ ಅದಕ್ಕೆ ಹೇಳಲಾಗದು. ಬ್ರಹ್ಮವೆಂದರೆ ಸರ್ವವ್ಯಾಪಿ. ಸರ್ವವ್ಯಾಪಿ ಕೂಡ ಅಲ್ಲ ; ಅದು ಎಲ್ಲಿಂದ ಆರಂಭವಾಗುತ್ತದೆ?

**ಪ್ರಶ್ನೆ:** ಶಬ್ದ ಅದರದ್ದಲ್ಲ , ಸ್ಪರ್ಶ ಅದರದಲ್ಲ, ಆ ವಸ್ತು(ಬ್ರಹ್ಮ) ಇದೆ ಎನ್ನುವುದಕ್ಕೆ ಪ್ರಮಾಣ ಏನು ಮಹಾರಾಜ್?

**ಮಹಾರಾಜ್:** ಪ್ರಮಾಣದ ಆವಶ್ಯಕತೆ ಇಲ್ಲ. ಒಂದು ವಸ್ತುವಿನ ಸಂಬಂಧದ ಬಗ್ಗೆ ಸಂದೇಹ ಬಂದಾಗ ಅದಕ್ಕೊಂದು ಪ್ರಮಾಣ ಬೇಕು. ಆದರೆ ಇಲ್ಲಿ ವಸ್ತುವಿನ ಬಗ್ಗೆ ನಿಸ್ಸಂದೇಹವಿರುವಾಗ ಪ್ರಮಾಣದ ಆವಶ್ಯಕತೆ ಇಲ್ಲ.

**ಪ್ರಶ್ನೆ:** ನಿಸ್ಸಂದೇಹ ಎಂಬುದು ಹೇಗಾಯಿತು? ಯಾವ ವಸ್ತು **ಅಶಬ್ದಮ್, ಅಸ್ಪರ್ಶಮ್** ಎಂದಾಗಿರುವಾಗ ನಿಸ್ಸಂದೇಹವಾಗುವುದು ಹೇಗೆ? ನೋಡಲೂ ಸಿಗುತ್ತಿಲ್ಲ, ಅನುಭವಕ್ಕೂ ಬರುತ್ತಿಲ್ಲ.

**ಮಹಾರಾಜ್:** ನೀವೇ ಮಾಡಿ ನೋಡಿ, ನೀವೇ ಅಜ್ಞಾನ.

**ಪ್ರಶ್ನೆ:** ಸಂಗತಿ ಇಷ್ಟೆ, ನಾವು ಅಜ್ಞಾನದಲ್ಲಿರಬಹುದು. ಬ್ರಹ್ಮವೆನ್ನುವುದು ಇದೆ, ಆದರೆ ಬ್ರಹ್ಮ ವಸ್ತುವಿನ ಪ್ರಮಾಣವೇ ಇಲ್ಲದಿರುವಾಗ, ಅದರ ಬಗ್ಗೆ ವಿಚಾರ ಮಾಡಿ ಏನು ಪ್ರಯೋಜನ?

**ಮಹಾರಾಜ್:** ಅಯ್ಯಾ! ಬ್ರಹ್ಮನಿಂದಲೇ ಸಮಸ್ತ ಪ್ರಮಾಣವೂ ಪ್ರಮಾಣಿತವಾಗಿದೆ. ಬ್ರಹ್ಮವನ್ನು ಬೇರೆ ಪ್ರಮಾಣದಿಂದ ಸಾಧಿಸಲು ಸಾಧ್ಯವಿಲ್ಲ.

**ಪ್ರಶ್ನೆ:** ಹಾಗಾದರೆ ಬ್ರಹ್ಮವಸ್ತುವನ್ನು ಕುರಿತು ಚರ್ಚೆ ಮಾಡದಿದ್ದರೇನೇ ಲೇಸು.

**ಮಹಾರಾಜ್:** ಚರ್ಚೆ ಮಾಡದಿದ್ದರೆ ಅದೊಂದು ವಿವರಣೆಯಷ್ಟೆ? ಹಾಗಲ್ಲ , ಯಾರು ಬ್ರಹ್ಮನಿಲ್ಲವೆಂದು ಹೇಳುತ್ತಾನೋ ಅವನು ಯಾರು?

**ಪ್ರಶ್ನೆ:** ಅವನನ್ನು ಶಬ್ದದ ಮೂಲಕವೂ ತಿಳಿಯಬಹುದು, ಸ್ಪರ್ಶದ ಮೂಲಕವೂ ತಿಳಿಯಬಹುದು, ಅವನೇ ಮಾತಾಡುತ್ತಿದ್ದಾನೆ.

**ಮಹಾರಾಜ್:** ಒಂದು ವೇಳೆ ಅದನ್ನು (ಬ್ರಹ್ಮವನ್ನು) ಹುಡುಕಿದರೆ, ಅದರ ಸ್ವರೂಪವನ್ನು ಹಿಡಿಯಲು ಪ್ರಯತ್ನಪಟ್ಟರೆ, ಆಗ ಏನಾದರೂ ಸಿಗಬಹುದೆ?

**ಪ್ರಶ್ನೆ:** ಒಂದು ವೇಳೆ ಏನೂ ಗೊತ್ತಾಗದಿದ್ದರೆ, ಅವನಿಲ್ಲ; ಶೂನ್ಯ.

**ಮಹಾರಾಜ್:** ಶೂನ್ಯವೆಂದು ಹೇಳುವಾಗಲೂ ಶಬ್ದದಿಂದಲೇ ಹೇಳಲಾಗುತ್ತದೆ.

**ಪ್ರಶ್ನೆ:** ನಾವೂ ಅದನ್ನೇ ಹೇಳಿದ್ದು. ಶಬ್ದದ ಮೂಲಕವೇ ವಸ್ತು ಪ್ರಕಾಶಿಸುವುದು. ಶಬ್ದಾತೀತವಾದದ್ದು ಯಾವುದಿದೆ?

**ಮಹಾರಾಜ್:** ಬ್ರಹ್ಮಸ್ವರೂಪವು ಶಬ್ದಾತೀತ ಎಂಬ ವಿಚಾರವನ್ನು ಅರ್ಥಮಾಡಿಕೊಳ್ಳಬೇಕು. ಸ್ವರೂಪವನ್ನು ಮಾತಿನಿಂದ ಹೇಳಲಾಗದು, ಅದು ವಾಗತೀತ. ಇದೇ ಬ್ರಹ್ಮವನ್ನು ಅರ್ಥಮಾಡಿಕೊಳ್ಳುವ ರೀತಿ.

**ಪ್ರಶ್ನೆ:** ಇದು ಶೂನ್ಯವೆಂದು ಹೇಳಿದರೂ, ಅದನ್ನು ನಮ್ಮಿಂದ ಅರ್ಥೈಸಲಾಗದು, ಇದನ್ನು ಕೂಡ ನಾವು ತಿಳಿದುಕೊಳ್ಳಬೇಕು.

ಹೇಳಲಾಗದು, ಆದರೆ ಎಲ್ಲಿಯತನಕ ಯಾವುದನ್ನೂ ಹೇಳ ಲಾಗದು?

**ಮಹಾರಾಜ್:** ಹೇಳಲಾಗದು ಎಂದು ಹೇಳಿಯೂ ಮತ್ತೆ ಹೇಳು ತ್ತೇವೆ. ಇದು ಉಲ್ಟಾ (ಅಸ್ತವ್ಯಸ್ತ) ವಿಚಾರ. ಹೇಳಲಾಗದೆಂದರೆ ಅದೇ ಶಬ್ದಾತೀತ. ಹೇಳಲಾಗದೆಂದು ಹೇಳಿ ಪುನಃ ಪುನಃ ಅದನ್ನೇ ಹೇಳಿದ ಹಾಗಾಯಿತು. ಇದು ಯಾವ ಸೀಮೆಯ ವಿಚಾರ?

**ಪ್ರಶ್ನೆ:** ಪೂರ್ವಪಕ್ಷಿ ಇದನ್ನೇ ಹೇಳುತ್ತಾನೆ. ಯಾವುದನ್ನು ತಿಳಿದು ಕೊಳ್ಳಲು ಬೇರೆ ಯಾವ ಉಪಾಯವೇ ಇಲ್ಲವೋ, ಅದರ ಅಸ್ತಿತ್ವ ಎಲ್ಲಿಂದ ಉಂಟಾಗಬೇಕು?

**ಮಹಾರಾಜ್:** ಹಾಗಲ್ಲ , ಹೇಳುತ್ತೇನೆ ಕೇಳಿ. ಯಾವುದರ ಬಗ್ಗೆ ಸಂದೇಹಕ್ಕೆ ಅವಕಾಶವೇ ಇಲ್ಲವೋ, ಅದರ ಬಗ್ಗೆ ಇನ್ನು ಪ್ರಮಾಣ ಮಾಡುವುದು ಹೇಗೆ?

**ಪ್ರಶ್ನೆ:** ಸಂದೇಹಕ್ಕೆ ಅವಕಾಶವಿಲ್ಲ ಏಕೆ?

**ಮಹಾರಾಜ್:** ನೀನು ಇದ್ದೀಯೋ ಇಲ್ಲವೋ, ನಿನ್ನ ಅಸ್ತಿತ್ವ ದ ಬಗ್ಗೆ ಸಂದೇಹವುಂಟೆ?

**ಪ್ರಶ್ನೆ:** ನನ್ನ ಅಸ್ತಿತ್ವದ ಬಗ್ಗೆ ನನಗೆ ಯಾವ ಸಂದೇಹವೂ ಇಲ್ಲ.

**ಮಹಾರಾಜ್:** ಸಂದೇಹವಿಲ್ಲ. ಈಗ ನಿನ್ನ ಅಸ್ತಿತ್ವವೇನು? ಅದರ ಬಗ್ಗೆ ವಿಚಾರ ಮಾಡುತ್ತಾ ಹೋದ ಹಾಗೆ ಎಲ್ಲವೂ ಶೂನ್ಯವಾಗು ತ್ತದೆ. ನಿನ್ನ ಅಸ್ತಿತ್ವವನ್ನು ಹುಡುಕಲು ಏನೂ ಸಿಗುವುದಿಲ್ಲ , ಇದೇ ನಿನ್ನ ಸ್ವರೂಪ. *

# ತಪಸ್ವಿನಿ ರಾಜಕುಮಾರಿ

— ಕೆ.ವಿ. ಸ್ವರ್ಣಗೌರಿ

ಭಾರತದ ಸ್ವಾತಂತ್ರ್ಯಪೂರ್ವದ ದಿನಗಳಲ್ಲಿ ಪುರಾತನ-ಆಧುನಿಕ ವಿಚಾರಗಳ, ಹಾಗೂ ಆದರ್ಶಗಳ ಸಂಘರ್ಷ ನಡೆಯುತ್ತಿದ್ದ ಸಂದರ್ಭದಲ್ಲಿ ಹೊಸ ಪುನರುತ್ಥಾನದ ಗುರಿಯನ್ನು ಹೊತ್ತು, ವಿವಿಧ ಕ್ಷೇತ್ರಗಳಲ್ಲಿ ಮಹತ್ತರ ಸಾಧನೆ ಮಾಡಿದ ಮಹಿಳೆಯರಲ್ಲಿ ಒಬ್ಬರಾದ ಗಂಗಾಬಾಯಿಯವರ ಜೀವನದ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟಿರುವ ಲೇಖಕಿ ಮೈಸೂರು ಆಶ್ರಮದ ಭಕ್ತರು.



ಹ್ಞೂ! ತೆಗೆದುಕೋ! ಎಂದು ಅತ್ಯಂತ ಬೆಲೆಬಾಳುವ, ಸುಂದರವಾದ ಮುತ್ತಿನ ದೊಡ್ಡ ಸರವನ್ನು ಮುಂದೆ ಹಿಡಿದು ನಿಂತಿದ್ದಾಳೆ ರಾಜಕುಮಾರಿ! ಅರಮನೆಯ ಕೋಟೆ ಕಾಯುತ್ತಾ ನಿಂತಿದ್ದ ಕಾವಲುಗಾರನಿಗೆ ಆಸೆ ಒಂದೆಡೆಯಾದರೆ, ಭಯ ಮತ್ತೊಂದೆಡೆ. ಇಂತಹ ಮಧ್ಯರಾತ್ರಿಯಲ್ಲಿ ರಾಜಕುಮಾರಿ ಒಬ್ಬಳೇ ಕುದುರೆಯೇರಿ ಎಲ್ಲೋ ಹೊರಟಂತಿದೆ. ಆದರೆ ಹೇಗೆ ಕೇಳುವುದು?? ಏನು ಮಾಡುವುದು? ಕೊನೆಗೆ ಅಮೂಲ್ಯ ವಾದ ಮುತ್ತಿನ ಹಾರದ ಆಸೆಯೇ ಗೆದ್ದಿತು. ಹಾರವನ್ನು ಕೊಟ್ಟು ರಾಜಕುಮಾರಿ ಕ್ಷಣಮಾತ್ರದಲ್ಲಿ ಕಣ್ಮರೆಯಾದಳು. ಹದಿಹರೆ ಯದ, ಮೋಹಕ ರೂಪಿನ ಚೆಲುವೆಯು ಕುದುರೆಯೇರಿ, ಕೈಯಲ್ಲಿ ಹೊಳೆಯುತ್ತಿರುವ ಕತ್ತಿಯನ್ನು ಝಳಪಿಸುತ್ತಾ ಹೊರಟಿದಾದ್ದರೂ ಎಲ್ಲಿಗೆ? ಒಂದು ಡೇರೆ ಹಾಗೂ ಸೊಳ್ಳೆ ಪರದೆ ಯಷ್ಟೇ ಅವಳ ಆಸ್ತಿ. ಹಸಿರು ಗದ್ದೆ, ಹೊಲ, ಕಾಡುಮೇಡು ಗಳನ್ನು ದಾಟುತ್ತಾ ಕೊನೆಗೆ ತಾಮ್ರಪರ್ಣೆ ನದಿಯ ದಡದಲ್ಲಿ ನಿಂತಳು, ತನ್ನ ರಾಜಕುಮಾರಿಯ ಪೋಷಾಕನ್ನು ಕಿತ್ತೆಸೆದು ತೊಗಟೆಯಿಂದ ಮುಚ್ಚಿಕೊಂಡಳು. ಆ ವನ್ಯಮೃಗಗಳ ನಡುವೆ, ಕಂದಾಹಾರಗಳನ್ನು ಸೇವಿಸುತ್ತಾ ಹಿಂದಿನ ಕಾಲದ ಋಷಿ ಗಳಂತೆ ತೀವ್ರ ತಪಸ್ಸಿನಲ್ಲಿ ಮುಳುಗಿದಳು. ಹೃದಯದಲ್ಲಿ ಭಗವಂತನ ದರ್ಶನಕ್ಕಾಗಿ ವೈರಾಗ್ಯ, ವ್ಯಾಕುಲತೆಗಳ ಅಗ್ನಿ ಹತ್ತಿ ಉರಿಯು ತ್ತಿದ್ದರೆ ೪೧ ದಿನಗಳ ಕಾಲ ಪಂಚಾಗ್ನಿ ತಪಸ್ಸನ್ನು ಮಾಡಿದಳೀ ಹದಿಹರೆಯದ ಬಾಲೆ !!

ಇತ್ತ ಅರಮನೆಯಲ್ಲಿ ಒಂದು ದೊಡ್ಡ ಕೋಲಾಹಲವೇ ಎದ್ದಿತ್ತು ರಾಜಕುಮಾರಿಯ ನಿರ್ಗಮನದಿಂದ. ಚಿಂತಾಕುಲನಾದ ರಾಜನು ತೀವ್ರ ತನಿಖೆಯಿಂದ ಮಗಳನ್ನು ಪತ್ತೆ ಹಚ್ಚಿ ವೆಲ್ಲೂರು

ಕೋಟೆಗೆ ಹಿಂತಿರುಗಿ ಕರೆತಂದನು. ಆದರೆ ತಾನೊಂದು ಬಗೆದರೆ ದೈವವೊಂದು ಬಗೆಯುವುದು. ಅಚ್ಚುಮೆಚ್ಚಿನ ಕುವರಿಯನ್ನು ಕರೆತಂದ ಕೆಲವೇ ತಿಂಗಳಲ್ಲಿ ರಾಜನು ಮರಣವನ್ನಪ್ಪಿದನು.

ದಕ್ಷಿಣ ಭಾರತದ ಅರ್ಕಾಟ್ (ಈಗಿನ ಚೆನ್ನೈ)ನ ರಾಜ ನಾರಾಯಣರಾವ್ ಮತ್ತು ಅವನ ಧರ್ಮಪತ್ನಿ ನಿಷ್ಠಾವಂತ ಬ್ರಾಹ್ಮಣಕುಲದ ದೈವಭಕ್ತರು. ೧೯ನೇ ಶತಮಾನದ ಆದಿಭಾಗ ದಲ್ಲಿ ಅರ್ಕಾಟ್‌ನ ಕೋಟೆಯಲ್ಲಿದ್ದರು. ಅನೇಕ ವರ್ಷಗಳಿಂದ ಸಂತಾನವಿಲ್ಲದ ರಾಜದಂಪತಿಗಳು ಪೂಜೆ, ಪ್ರಾರ್ಥನೆ, ವ್ರತ, ನಿಯಮಾದಿಗಳಿಂದ ಗಂಗೆಯನ್ನು ಆರಾಧಿಸಿ ಪಡೆದ ಪುತ್ರಿಯೇ ಗಂಗಾಬಾಯಿ. ಹುಟ್ಟಿದ ತಾರೀಖು ತಿಳಿಯದಿದ್ದರೂ ಝಾನ್ಸಿರಾಣಿ ಲಕ್ಷ್ಮೀಬಾಯಿಯ ಸಮಕಾಲೀನಳಾದ ಕಾರಣ ಕ್ರಿ.ಶ.೧೮೩೫ರಲ್ಲಿ (ಝಾನ್ಸಿರಾಣಿಯ ಜನನ) ಜನಿಸಿದಳೆಂದು ತೀರ್ಮಾನಿಸಲಾಯಿತು.

ರಾಜನ ಕಾಲಾನಂತರ ರಾಜ್ಯಭಾರವನ್ನು ಸಮರ್ಥವಾಗಿ ನಡೆಸುತ್ತಿದ್ದ ರಾಜಕುವರಿ ಗಂಗಾಬಾಯಿಯ ಚಟುವಟಿಕೆಗಳ ಮೇಲೆ ಕಣ್ಣಿಟ್ಟಿದ್ದ ಬ್ರಿಟಿಷರು ಒಮ್ಮೆ ಆಕೆಯನ್ನು ಬಂಧಿಸಿ ತಿರುಚಿರಾಪಳ್ಳಿಯ ಕೋಟೆಯಲ್ಲಿರಿಸಿದರು. ರಾಜ್ಯವನ್ನು ಕಸಿದು ಗಂಗಾಬಾಯಿಯ ತಮ್ಮನನ್ನು ಕೇವಲ ಒಬ್ಬ ಜಮೀನುದಾರ ನನ್ನಾಗಿ ಮಾಡಿದರು.

ಇತ್ತ ಕೋಟೆಯಲ್ಲಿ ಗಂಗಾಬಾಯಿ ಒಂದು ಕ್ಷಣವನ್ನೂ ವ್ಯರ್ಥಗೊಳಿಸದೆ ಅನೇಕ ಕಸರತ್ತುಗಳಲ್ಲಿ ತನ್ನನ್ನು ತೊಡಗಿಸಿ ಕೊಂಡಳು. ವಿದ್ಯೆ, ಚಿತ್ರಕಲೆ, ದೇಶಪ್ರೇಮ, ಆಧ್ಯಾತ್ಮಿಕ ಪಿಪಾಸೆ, ದಕ್ಷ ಆಡಳಿತಗಾರಿಕೆ ಎಲ್ಲವೂ ಆಕೆಯಲ್ಲಿ ಮೇಳೈಸಿದ್ದವು.

ಕೋಟೆಯಿಂದ ಬಿಡುಗಡೆಯಾದ ಕೂಡಲೇ ನೇರವಾಗಿ ನೈಮಿಷಾರಣ್ಯಕ್ಕೆ ತೆರಳಿದ ರಾಜಕುಮಾರಿ ಉಗ್ರತರ ತಪಸ್ಸಿನಲ್ಲಿ ತೊಡಗಿದಳು. ಒಂದು ದಿನ ಅಲ್ಲಿನ ಗೌರೀಶಂಕರ ಮಂದಿರಕ್ಕೆ ಅವಳ ಪ್ರವೇಶವನ್ನು ಅಡ್ಡಿಪಡಿಸಿದ ಕಾರಣ ನೊಂದು ತಾನೇ ನೈಮಿಷಾರಣ್ಯದಲ್ಲಿ ಗೌರೀಶಂಕರ ಮಂದಿರವನ್ನು ಕಟ್ಟಿಸುವು ದಾಗಿ ಪ್ರತಿಜ್ಞೆ ಮಾಡಿದಳು. ಹದಿನೈದು ದಿನಗಳಲ್ಲಿ ಮಂದಿರ ನಿರ್ಮಾಣವಾಯಿತು! ಅಂದಿನಿಂದ ಜನ ಅಕೆಯನ್ನು ತಪಸ್ವಿನಿ ಮಾತಾಜಿ ಎಂದು ಗುರುತಿಸತೊಡಗಿದರು.

ಇದೇ ಸಮಯದಲ್ಲಿ ಕ್ರಿ.ಶ. ೧೮೫೭ರ ಮೇ ೧೧ರಂದು ಮೀರತ್‌ನಲ್ಲಿ ಸಿಪಾಯಿದಂಗೆ ಪ್ರಾರಂಭವಾಯಿತು. ಅಂದಿ ನಿಂದ ಗಂಗಾಬಾಯಿ ಕ್ರಿ.ಶ. ೧೮೫೮ ಜೂನ್ ೧೮ರ ವರೆಗೆ ರಾಣಿ ಝಾನ್ಸಿ ಲಕ್ಷ್ಮೀಬಾಯಿಯ ಅಂತ್ಯದವರೆಗೆ ಆಕೆಯೊಡ ನಿದ್ದು ಬ್ರಿಟಿಷರ ವಿರುದ್ಧ ಹೋರಾಡಿದಳು. ಲಕ್ಷ್ಮೀಬಾಯಿಯ ಆಪ್ತಸ್ನೇಹಿತೆ, ಸಲಹೆಗಾರ್ತಿ ಹಾಗೂ ಅಂಗರಕ್ಷಕಳಾಗಿದ್ದ ಗಂಗಾಬಾಯಿ ಯುದ್ಧದಲ್ಲಿ ಮಡಿದ ರಾಣಿಯ ಶವಸಂಸ್ಕಾರ ವನ್ನು ಗುಪ್ತವಾಗಿ ಮಾಡಿದಳು. ನಂತರ ಬ್ರಿಟಿಷರ ಕಣ್ತಪ್ಪಿಸಿ ನೇಪಾಳಕ್ಕೆ ಹೋದಳು. ಇಲ್ಲಿ ಗಂಗೆಗಾಗಿ ಒಂದು ದೇಗುಲ ನಿರ್ಮಿಸಿ ನಿತ್ಯ ಪೂಜೆಗೆ ಏರ್ಪಾಟು ಮಾಡಿದಳು. ಭಾರತ ದೇಶದ ಅನೇಕ ತೀರ್ಥಸ್ಥಳಗಳನ್ನು ಸಂದರ್ಶಿಸಿದಳು. ಮತ್ತೊಮ್ಮೆ ನೈಮಿಷಾರಣ್ಯಕ್ಕೆ ಹೋಗಿ ತೀವ್ರ ಸಾಧನೆಯಲ್ಲಿ ತೊಡಗಿದಳು. ಇವುಗಳೆಲ್ಲದರ ನಡುವೆಯೂ ಭಾರತವನ್ನು ಸ್ವತಂತ್ರಗೊಳಿಸಲು ಅವಳ ಮನಸ್ಸು ಸದಾ ತವಕಿಸುತ್ತಿತ್ತು.

ಹತ್ತೊಂಬತ್ತನೇ ಶತಮಾನದಲ್ಲಿ ಭಾರತೀಯರ ಪರಿಸ್ಥಿತಿ ಶೋಚನೀಯವಾಗಿತ್ತು. ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ನೀಡಿದ್ದ ಆದ್ಯತೆಯಿಂದಸಂಸ್ಕೃತಹಾಗೂಹಿಂದೂಶಾಸ್ತ್ರಾಧ್ಯಯನಗಳನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿತ್ತು. ಕ್ರಿಶ್ಚಿಯನ್ ಮಿಷನರಿ ಶಾಲೆಗಳು ಯುವ ಮನಸ್ಸುಗಳ ಮೇಲೆ ದುಷ್ಪರಿಣಾಮ ವನ್ನುಂಟುಮಾಡುತ್ತಿದ್ದವು. ತಮ್ಮ ಸಂಸ್ಕೃತಿಯಲ್ಲಿ, ಶಾಸ್ತ್ರಗಳಲ್ಲಿ, ಆಚಾರವಿಚಾರಗಳಲ್ಲಿ, ಯುವಪೀಳಿಗೆ ಭರವಸೆಯನ್ನೇ ಕಳೆದು ಕೊಂಡಿತು. ಭವ್ಯಭಾರತದ ಬುನಾದಿಗೇ ಕೊಡಲಿಪೆಟ್ಟು!

ಇದರಿಂದ ಮುಂದಿನ ಸಮಾಜ ಹಾಗೂ ಜನಾಂಗಗಳ ಮೇಲೆ ಆಗುವ ದುಷ್ಪರಿಣಾಮವನ್ನು ಆಲೋಚಿಸಿದ ಮಾತಾಜಿ ಕೂಡಲೇ ತಾಯಿ ಕಾಳಿಯ ಮೊರೆಹೊಕ್ಕು, ಆಕೆಯ ಕೃಪಾಶೀರ್ವಾದವನ್ನು ಪಡೆದು ಹಿಂದೂ ಹೆಣ್ಣುಮಕ್ಕಳಿಗೆ ವಿದ್ಯಾಭ್ಯಾಸ ಕೊಡಲು ಮಹಾಕಾಳಿ ಪಾಠಶಾಲೆ ಪ್ರಾರಂಭಿಸಿದಳು. ಪೂಜೆ ಪುನಸ್ಕಾರ, ವ್ರತಾಚರಣೆ, ಶಾಸ್ತ್ರಾಧ್ಯಯನ, ಹಿಂದೂ ಕೌಟುಂಬಿಕ ಧಾರ್ಮಿಕ ಮೌಲ್ಯಗಳು, ದೇಶಪ್ರೇಮ ಮುಂತಾದವುಗಳಿಗೆ ಪ್ರಾಶಸ್ತ್ಯ ನೀಡಲಾಯಿತು. ೧೯ನೇ ಏಪ್ರಿಲ್ ೧೮೯೩ರಲ್ಲಿ ಮೂವತ್ತು ಹೆಣ್ಣುಮಕ್ಕಳಿಂದ ಪ್ರಾರಂಭವಾದ ಆ ಶಾಲೆ ಮೂರು ವರುಷಗಳೊಳಗೆ ನೂರಿಪ್ಪತ್ತು ಮಕ್ಕಳಾಗಿ ಶಾಲೆ ಯನ್ನು ಸ್ಥಳಾಂತರಿಸಲಾಯಿತು. ಕ್ರಿ.ಶ.೧೮೯೭ರಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಪ್ರಿಯ ಶಿಷ್ಯ ಶರತ್‌ಚಂದ್ರನೊಡನೆ ಆಮಂತ್ರಣದ ಮೇರೆಗೆ ಶಾಲೆಗೆ ಭೇಟಿ ನೀಡಿದರು. (ಈ ಭೇಟಿಯ ವಿವರಗಳು ಸ್ವಾಮಿ ವಿವೇಕಾನಂದರ ಕೃತಿಶ್ರೇಣಿಯ ಗುರುಶಿಷ್ಯ ಸಂವಾದದಲ್ಲಿದೆ). ಮಾತಾಜಿಯ ಪರಿಶ್ರಮದಿಂದ ಮಕ್ಕಳ ಶಿಕ್ಷಣ ಹಾಗೂ ವ್ಯಕ್ತಿತ್ವದಲ್ಲಾದ ಬದಲಾವಣೆಯನ್ನು ಕಂಡ ಸ್ವಾಮೀಜಿ ಹಿರಿಹಿರಿ ಹಿಗ್ಗಿದರು. ಮುಂದಿನ ನಾಲ್ಕು ವರ್ಷಗಳಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ೧೮೦ಕ್ಕೆ ಏರಿತು. ಮಹಾಕಾಳಿ ಪಾಠಶಾಲೆಯ ಕೀರ್ತಿ ಎಲ್ಲೆಡೆ ಪಸರಿಸಿತು.

ಕ್ರಿ.ಶ. ೧೮೯೭ರವರೆಗೆ ಮಹಾರಾಣಿ ತಪಸ್ವಿನಿ ಮಾತಾಜಿ ತಮ್ಮಲ್ಲಿದ್ದ ಒಡವೆಗಳನ್ನೆಲ್ಲಾ ಮಾರಾಟ ಮಾಡಿ ಶಾಲೆಯ ಖರ್ಚನ್ನು ನಿಭಾಯಿಸಿದಳು. ನಂತರ ಆರ್ಥಿಕಸ್ಥಿತಿ ಬಿಗಡಾ ಯಿಸಿ ಶಾಲೆಯ್ನು ಮುಚ್ಚುವ ಪರಿಸ್ಥಿತಿ ಬಂದಾಗ ಸ್ವಾಮಿ ವಿವೇಕಾನಂದರೇ ಮುಂದೆ ಬಂದು ಆರ್ಥಿಕ ನೆರವು ನೀಡಿ ದರು. ಅಷ್ಟೇ ಅಲ್ಲದೆ ಅನೇಕ ಕಡೆಗಳಿಂದಲೂ ನೆರವು ಬರತೊಡಗಿತು.